ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1366 (2021)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಸುತ್ತ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು ?

ಆ) ಇವರಿಗೆ ಪ್ರತಿ ಎಕರೆಗೆ ಕೊಡುತ್ತಿರುವ ಜೆಲೆ ಎಷ್ಟು ?

ಇ) ಈ ಸ್ವಾಧೀನ ಮಾಡಿದ ಸ್ಥಳದಲ್ಲಿ ಸ್ಥಾಪಿಸಲಾಗುವ ಕೈಗಾರಿಕೆಗಳಲ್ಲಿ ರೈತರ ಮಕ್ಕಳಿಗೆ ಎಷ್ಟು ಜನರಿಗೆ ಉದ್ಯೋಗ ಕೊಡಲಾಗಿದೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 4,333 ಎಕರೆ 05 ಗುಂಟೆಗಳು.

ಆ) ಭೂ ಸ್ವಾಧೀನಪಡಿಸಿಕೊಳ್ಳುವ ಭೂಮಿಗಳಿಗೆ ಪ್ರತಿಯೊಂದು ಭೂಮಿಗೂ ಆ ಭೂಮಿಯ ಗುಣಮಟ್ಟ, ಭೂಮಿ ಅಭಿವೃದ್ಧಿ ಹೊಂದಿರುವುದು ಮತ್ತು ಭೂಮಿಯ ಸ್ವರೂಪ ಹಾಗೂ ಸುತ್ತ ಮುತ್ತಲಿನ ಭೂಮಿಗಳ ಮಾರಾಟ ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಭೂ ಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ಧನವನ್ನು ನಿಗಧಿಪಡಿಸಲಾಗುವುದು. ಮಂಡಳಿ ಯಲ್ಲಿ ಇಲ್ಲಿಯವರೆವಿಗೆ ಕನಿಷ್ಠ ಸುಮಾರು 3,000-00ರೂ.ಗಳಿಂದ ಗರಿಷ್ಠ 65,000-00ರೂ.ಗಳವರೆಗೆ ಪ್ರತಿಯೊಂದು ಎಕರೆಗೆ ಪರಿಹಾರಧನವನ್ನು ಆಯಾಯ ಭೂಮಿಗಳ ಅನುಸಾರವಾಗಿ ಪರಿಹಾರ ಧನವನ್ನು ಕೊಡಲಾಗುತ್ತಿದೆ.

ಆ) ಭೂಸ್ವಾಧೀನ ಕ್ರಮದಿಂದ ಭೂಮಿಯನ್ನು ಕಳೆದುಕೊಂಡ ರೈತರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಅವರ ವಿದ್ಯಾರ್ಹತೆ ಮತ್ತು ಸೂಕ್ತತೆಗನುಗುಣವಾಗಿ ಆಧ್ಯತೆ ಮೇರೆಗೆ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ನೀಡಬೇಕೆಂಬ ಪರತ್ನವನ್ನು ಉಧ್ಯಮಿಗಳೊಡನೆ ನೆರವೇರಿಸುವ ಗುತ್ತಿಗೆ ಮತ್ತು ಕರಾರು ಪತ್ರದಲ್ಲಿ ಅಳವಡಿಸಲಾಗಿದೆ.

ಇಂತಹ ರೈತರು ಅಥವಾ ಅವರ ಅವಲಂಬಿತರಿಂದ ಬಂದ ಅರ್ಜಿಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತತ್ಸಂಬಂಧ ಕಾರ್ಖಾನೆಗಳಿಗೆ ಕಳುಹಿಸಿ ಸೂಕ್ತ ನಿರ್ದೇಶನವನ್ನೂ ಸಹ ನೀಡಲಾಗುವುದು.

ವಿಷಯ:ರಾಜ್ಯದ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಕಾರ್ಯಕ್ರಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1367 (2022)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕಾರ್ಯಕ್ರಮಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದೆ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿರುವ ಸ್ಥಳಗಳು ಯಾವುವು ;

ಆ) ಈ ಕಾರ್ಯಕ್ರಮದ ಸೌಲಭ್ಯ ಪಡೆದ ನಿರ್ದಿಷ್ಟ ಫಲಾನುಭವಿಗಳ ಸಂಖ್ಯೆ ಎಷ್ಟು ;

ಇ) ಈ ಯೋಜನೆಗಳಲ್ಲಿ ಕಾರ್ಯಗತವಾಗದೆ ಕೈತಪ್ಪಿ ಹೋದ ಯೋಜನೆಗಳೆಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಯೋಜನೆಗಳನ್ನು ಯೋಜಿಸಲು ಯೋಚಿಸಿದ್ದು, ಈ ಬಗ್ಗೆ ಹಲವಾರು ಮಾಹಿತಿಗಳನ್ನು ರಾಜ್ಯ ಸರ್ಕಾರದಿಂದ ಕೋರಿದೆ. ಈ ಮಾಹಿತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪರಿಸಲಾಗುತ್ತಿದ್ದು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ

ಕಳುಹಿಸಿಕೊಡಲಾಗುವುದು. ಇಷ್ಟೇ ಹೊರತು, ಕೇಂದ್ರ ಸರ್ಕಾರ ಇನ್ನೂ ಯಾವುದೇ ಯೋಜನೆಗಳನ್ನು ಈ ಬಗ್ಗೆ ಪ್ರಾರಂಭಿಸಿರುವುದರ ಮಾಹಿತಿ ರಾಜ್ಯ ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 'ಆ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ:ಕೋಲಾರ ಜಿಲ್ಲೆಯಲ್ಲಿ ಟ್ರೈಸಂ ಯೋಜನಾ ಅಡಿಯಲ್ಲಿ ತೆರೆಯಲಾದ ಕೈಗಾರಿಕಾ ಘಟಕಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1369 (2037)

ಶ್ರೀ ಎ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ (ಡಿಸೆಂಬರ್-91ರವರೆಗೆ) (ಟ್ರೈಸಂ)ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿದೆ(ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಇವುಗಳಿಗೆ ತಗುಲಿದ ವೆಚ್ಚವೆಷ್ಟು ?

ಇ) ಈ ಯೋಜನೆಯಿಂದ ಎಷ್ಟು ಜನರಿಗೆ ಅನುಕೂಲವಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ(ಡಿಸೆಂಬರ್91ರವರೆಗೆ)(ಟ್ರೈಸಂ) ಯೋಜನೆಯಡಿಯಲ್ಲಿ 874 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ
1) ಕೋಲಾರ	81
2) ಮಾಲೂರು	65
3) ಮುಳಬಾಗಿಲು	86
4) ಬಂಗಾರಪೇಟೆ	93
5) ಶ್ರೀನಿವಾಸಪುರ	79
6) ಗೌರಿಬಿದನೂರು	86
7) ಚಿಕ್ಕಬಳ್ಳಾಪುರ	76
8) ಗುಡಿಬಂಡೆ	53
9) ಸಿಡ್ಲಘಟ್ಟ	103
10) ಚಿಂತಾಮಣಿ	72
11) ಬಾಗೇಪಲ್ಲಿ	80
ಒಟ್ಟು	874

ಆ) ಇವುಗಳಿಗೆ ತಗುಲಿದ ವೆಚ್ಚು ರೂ. 15,29,122-00